**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ** ಶಹಾಬಾದ

**CC.No.454/2023**

**CW : 08 PW: 02**

**ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ : 06.08.2026**

| | |
|---|---|
| ಹೆಸರು | : ವಿಜಯಲಕ್ಷ್ಮಿ ಲಷ್ಕರ |
| ತಂದೆಯ ಹೆಸರು | : ಕನಕಪ್ಪ |
| ವಯಸ್ಸು | : 37 |
| ಉದ್ಯೋಗ | : ಅಬಕಾರಿ ನಿರೀಕ್ಷಕರು |
| ವಾಸಸ್ಥಳ | : ಚಿತ್ತಾಪೂರ |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿ: 04/07/2022 ರಿಂದ 13/01/2025 ರವರೆಗೆ ನಾನು ಚಿತ್ತಾಪೂರ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ನಾನು ದಿ: 01/11/2022 ರಂದು ಚಾಸಾ-7 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು ಪರಿಶೀಲಿಸಿ ಮುಂದಿನ ತನಿಖೇಯನ್ನು ಪ್ರಾರಂಭಿಸಿರುತ್ತೇನೆ. ದಿಃ 14/11/2022 ರಂದು ರಂದು ಮಾನ್ಯ ಪೌರಾಯುಕ್ತರು ನಗರ ಸಭೆ ಕಾರ್ಯಾಲಯದವರಿಗೆ ಗುನ್ಹಾ ಸ್ಥಳದ ಮನೆಯ ಆಸ್ತಿಯ ದಾಖಲೆಯನ್ನು ಪೂರೈಸಲು ಪತ್ರವನ್ನು ಬರೆದಿರುತ್ತೇನೆ. ದಿಃ 26/12/2022 ರಂದು ಪೌರಾಯುಕ್ತ ಕಾರ್ಯಾಲಯದವರು ವರದಿಯನ್ನು ನೀಡಿದ್ದು ಅದರಲ್ಲಿ ಆರೋಪಿಯ ಹೆಸರಿನಲ್ಲಿ ಮನೆ ಇರುವುದಿಲ್ಲ ಎಂದು ವರದಿ ನೀಡಿರುತ್ತಾರೆ. ನಂತರ ಸ್ಥಳೀಕರನ್ನು ನಾನು ವಿಚಾರಿಸಿದಾಗ ಸದರಿ ಗುನ್ಹಾ ಸ್ಥಳದಲ್ಲಿ ಆರೋಪಿಯು ವಾಸ ವಿರುವ ಬಗ್ಗೆ ಖಚಿತ ಪಡಿಸಿಕೊಂಡಿರುತ್ತೇನೆ. ಅದೇ ದಿನ ನಾನು ಚಾಸಾ-4 ರಿಂದ 6 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ 26/08/2022 ರಂದು ರಾಸಾಯನಿಕ ವರದಿಯನ್ನು ಚಾಸಾ-7 ರವರು ಸ್ವೀಕರಿಸಿರುತ್ತಾರೆ. ನಂತರ ಆರೋಪಿಯ ವಿರುದ್ಧ ಸಾಕ್ಷ್ಯಧಾರಗಳು ಕಂಡುಬಂದಿದ್ದರಿಂದ ಮತ್ತು ತನಿಖೆಯು ಪೂರ್ಣಗೊಂಡ ಕಾರಣ ಮಾನ್ಯ ನ್ಯಾಯಾಲಯಕ್ಕೆ ದಿಃ 19/01/2023 ರಂದು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ಪೌರಾಯುಕ್ತರವರಿಗೆ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 26/12/2022 ರ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ಮತ್ತು 2 ನ್ನು

ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ .

**2**

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ**

ನಾನು ನಿಪಿ-1 ಮತ್ತು 2 ದಾಖಲೆಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗಲು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ರ ದಾಖಲೆಯನ್ನು ನೀಡಿದವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಕರನ್ನು ವಿಚಾರಿಸಿರುತ್ತೇನೆ, ಆದರೆ ಅವರು ಯಾರು ಸಹ ಕರಿಸಲ್ಲಿಲ್ಲ. ನಾನು ಯಾವ ದಿನ ಹೋಗಿರುತ್ತೇನೆ ಎಂದು ನನಗೆ ನೆನಪಿಲ್ಲ. ನಾನು ಸುಳ್ಳು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮುದ್ದಮಾಲಿಗೂ ಮತ್ತು ಆರೋಪಿತರಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಸಾಕ್ಷ್ಯಧಾರಗಳು ಇಲ್ಲದೇ ಇದ್ದರು ಆರೋಪಿಯು ಯಾವುದೇ ಅಪರಾಧವನ್ನು ಮಾಡದೇ ಇದ್ದರು ಆರೋಪಿಯ ವಿರುದ್ಧ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ-3 ರವರ ಮಾತನ್ನು ಕೇಳಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಪ್ರ.ದ.ನ್ಯಾ.ದಂ.ಗಳು, ಶಹಾಬಾದ**